# ಏರೋ ಷೋ ಹಾರೋ ಷೋ

ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ಪ್ರಸಿದ್ಧವಾಗಲಿಕ್ಕೆ ಏರ್ ಷೋ ಸಹ ಪ್ರಮುಖ ಕಾರಣ. ಫೆ. 20ರಿಂದ 24ರವರೆಗೆ ನಡೆಯಲಿರುವ 12ನೇ ಆವೃತ್ತಿಯ ಪ್ರದರ್ಶನ ಭಾರತೀಯ ವಾಯು ನಕಾಶೆಯಲ್ಲಿ ಬೆಂಗಳೂರಿನ ಮಹತ್ವವನ್ನು ಸ್ಪಷ್ಟಪಡಿಸುವಂತಿದೆ. ವೈಮಾನಿಕ ಪ್ರದರ್ಶನದ ಆತಿಥ್ಯವನ್ನು ಬೆಂಗಳೂರು ವಹಿಸುತ್ತಿರುವುದು ಇತ್ತೀಚೆಗೇನಲ್ಲ; ಶತಮಾನದ ಹಿಂದೆಯೇ ಇಲ್ಲಿ ಏರ್ ಷೋ ನಡೆದಿತ್ತು.

**■ ಶಶಿಕುಮಾರ್ ಸಿ.**

ಸರಿ ಸುಮಾರು ವರ್ಷದ ಹಿಂದೆ, ‘ವದಂತಿ’ಯೊಂದು ರಾಜ್ಯದಲ್ಲಿ ಹಬ್ಬಿತ್ತು. ಆ ವದಂತಿ ಕಿವಿಗೆ ಬಿದ್ದೊಡನೆ ಸಾರ್ವಜನಿಕರು, ಸಂಘ ಸಂಸ್ಥೆಗಳ ಕಾರ್ಯಕರ್ತರು ರಸ್ತೆಗಳಿದು ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದ್ದರು. ರಾಜ್ಯದ ರಾಜಕಾರಣಿಗಳು ಸಹ ಕೇಂದ್ರದ ವಿರುದ್ಧ ಕಿಡಿಕಾರಿದ್ದರು.

ಎರಡು ದಶಕಗಳಿಂದ ಬೆಂಗಳೂರಿನಲ್ಲಿ ನಡೆಯುತ್ತಿದ್ದ ದಕ್ಷಿಣ ಏಷ್ಯಾದ ಅತಿದೊಡ್ಡ ಏರೋ ಇಂಡಿಯಾ (ಏರ್ ಷೋ – ವೈಮಾನಿಕ ಪ್ರದರ್ಶನ) ಪ್ರದರ್ಶನದ 12ನೇ ಆವೃತ್ತಿಯು ಉತ್ತರಪ್ರದೇಶದ ಲಖನೌಗೆ ಸ್ಥಳಾಂತರಗೊಳ್ಳಲಿದೆ ಎಂಬುದು ಆ ವದಂತಿ ಆಗಿತ್ತು. ಮೂಲಗಳ ಪ್ರಕಾರ ಅದು ಕೇವಲ ವದಂತಿಯಷ್ಟೇ ಆಗಿರಲಿಲ್ಲ. ಸತ್ಯವೂ ಆಗಿತ್ತು. ಲಖನೌಗೆ ಏರ್ ಷೋ ಸ್ಥಳಾಂತರಕ್ಕೆ ರಕ್ಷಣಾ ಇಲಾಖೆ ಮುಂದಾಗಿತ್ತು. ಅದಕ್ಕಾಗಿ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪ್ರಯತ್ನ ನಡೆಸಿದ್ದರು ಎನ್ನುವ ಮತ್ತೊಂದು ವದಂತಿಯೂ ಹರಡಿತ್ತು ಆಗ.

ಏರ್ ಷೋ ಸ್ಥಳಾಂತರ ವದಂತಿಗೆ ರಾಜ್ಯದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದ್ದಂತೆ ಎಚ್ಚೆತ್ತ ಕೇಂದ್ರ ರಕ್ಷಣಾ ಮಂತ್ರಿ ನಿರ್ಮಲಾ ಸೀತಾರಾಮನ್, ‘ಪ್ರದರ್ಶನದ ಸ್ಥಳಾಂತರದ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ಲಖನೌಗೆ ಸ್ಥಳಾಂತರವಾಗುತ್ತಿದೆ ಎಂಬುದು ವದಂತಿಯಷ್ಟೇ’ ಎಂದು ಸ್ಪಷ್ಟೀಕರಣ ನೀಡಿದ್ದರು. ಅಲ್ಲಿಗೆ ಪ್ರತಿಭಟನಾಕಾರರು ಕೊಂಚ ನಿರಾಳರಾಗಿದ್ದರು. ಈಚೆಗಷ್ಟೇ ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲೇ ಏರ್ ಷೋ ನಡೆಸಲಾಗುತ್ತದೆ ಎಂಬುದನ್ನು ಇಲಾಖೆಯು ಅಧಿಕೃತವಾಗಿ ಪ್ರಕಟಿಸಿದ ಬಳಿಕ ಲಕ್ಷಾಂತರ ಏರ್ ಷೋ ಪ್ರಿಯರು ಸಂತಸಗೊಂಡಿದ್ದರು.

ಬೆಂಗಳೂರಿನ ಯಲಹಂಕದ ವಾಯುನೆಲೆಯಲ್ಲಿ 12ನೇ ಆವೃತ್ತಿಯ ‘ಏರೋ ಇಂಡಿಯಾ–2019’ ನಡೆಯಲಿದೆ. ಫೆಬ್ರುವರಿ 20ರಿಂದ ಶುರುವಾಗಲಿರುವ ಈ ಪ್ರದರ್ಶನ 24ರವರೆಗೆ ನಡೆಯಲಿದೆ. ದೇಶ ವಿದೇಶಗಳ ಲೋಹದ ಹಕ್ಕಿಗಳ ಬಾನೆತ್ತರದ ಹಾರಾಟವನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಮಂದಿ ಕಾತುರದಿಂದ ಕಾಯುತ್ತಿದ್ದಾರೆ. ಅಂತೆಯೇ ದೇಶ–ವಿದೇಶಗಳ ಅತ್ಯಾಧುನಿಕ ವಿಮಾನಗಳ ಹಾಗೂ ಅವುಗಳ ಯಂತ್ರೋಪಕರಣಗಳ ಪ್ರದರ್ಶನ ನಡೆಯಲಿದೆ. ಜಾಗತಿಕ ಮಟ್ಟದ ವಿಚಾರ ಸಂಕಿರಣಗಳೂ ನಡೆಯಲಿವೆ.

### ಬೆಂಗಳೂರಿನಲ್ಲೇ ಏಕೆ ಪ್ರದರ್ಶನ?

1996ರಲ್ಲಿ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಏರೋ ಇಂಡಿಯಾ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಒಟ್ಟು 11 ಪ್ರದರ್ಶನಗಳು ಜರುಗಿದ್ದು, ಅವೆಲ್ಲವೂ ಬೆಂಗಳೂರಿನಲ್ಲಿಯೇ ಆಯೋಜನೆಗೊಂಡಿವೆ ಎಂಬುದು ವಿಶೇಷ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇಲ್ಲಿಯೇ ಏಕೆ ಪ್ರದರ್ಶನ ಆಯೋಜಿಸಲಾಗುತ್ತಿದೆ ಎಂಬ ಪ್ರಶ್ನೆ ಮೂಡುತ್ತದೆ. ಈ ಪ್ರಶ್ನೆಗೆ ಉತ್ತರವೂ ಇಲ್ಲಿದೆ.

ಪ್ರಸ್ತುತ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಹೇಗೆ ಗುರುತಿಸಿಕೊಂಡಿದೆಯೇ ಅದೇ ರೀತಿ 1990ರ ಆಸುಪಾಸಿನಲ್ಲಿ ಏರೋಸ್ಪೇಸ್ ಕ್ಷೇತ್ರದಲ್ಲೂ ವರ್ಚಸ್ಸು ಪಡೆದಿತ್ತು. ‘ಇಂಡಿಯನ್

